**ಎಮ್ ವಿ ಸಿ ನಂಃ 890/2022**

**ಪಿ.ಡಬ್ಲ್ಯೂಃ1, ಗಣಪತಿ**

ದಿನಾಂಕ **:03-08-2023** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟಿ ಸವಾಲು :- ಶ್ರೀ **T V P** ವಕೀಲರಿಂದ

ನಾನು ಇಂದಿರಾ ನಗರ ಸೇಡಂ ನಲ್ಲಿ ಖಾಯಂ ನಿವಾಸಿ ಆಗಿರುತ್ತೇನೆ. ಸಾತನೂರ ನಮ್ಮ ಹಿರಿಯರ ಊರು. ಮೃತ ಪ್ರಕಾಶ ಇವರಿಗೆ ಮದುವೆ ಆಗಿರಲಿಲ್ಲಾ ನಾನು ಕೂಲಿ ಕೆಲಸ ಮಾಡುತ್ತೇನೆ. ಮೃತ ಪ್ರಕಾಶ ಕೂಲಿ ಕೆಲಸ ಮಾಡುತ್ತಿದ್ದರು. ಸದರಿ ಪ್ರಕಾಶ ಇವರು ಕೂಲಿ ಕೆಲಸ ಮಾಡಿ ತಿಂಗಳಿಗೆ 20 ಸಾವಿರ ಗಳಿಸುತ್ತಿದ್ದರು ಮತ್ತು ನಾವು ಅವರ ಆದಾಯದ ಮೇಲೆ ಅವಲಂಬಿತರಾಗಿದ್ದೇವು ಎಂದು ಸುಳ್ಳು ಹೇಳಿದ್ದೇವೆ ಅಂದರೆ ಸರಿಯಲ್ಲ. ದಿಃ 6-4-2022 ರಂದು ನನ್ನ ಮಗ ಪ್ರಕಾಶ ಇವರು ಅಟೋ ನಂಬರ KA 32-D-2776 ರಲ್ಲಿ ಸೇಡಂ ನಿಂದ ಕೊಡಂಗಲಗೆ ಹೋಗುತ್ತಿದ್ದಾಗ ಎಚಡಿಎಫಸಿ ಬ್ಯಾಂಕ ಹತ್ತಿರ KA 32-D-9993 ಅಟೋ ಅತಿ ವೇಗ ಮತ್ತು ಅಜಾರೂಗಕತೆಯಿಂದ ಬಂದು ಡಿಕ್ಕಿ ಪಡಿಸಿರುತ್ತದೆ ಎಂದು ಸುಳ್ಳು ಹೇಳಿದ್ದೇನೆ ಅಂದರೆ ಸರಿಯಲ್ಲ. ಸದರಿ ಅಟೋ ನಂಬರ KA 32-D-2776 ರ ಚಾಲಕನಿಗೆ ಡಿಎಲ್ ಇರಲಿಲ್ಲಾ ಎಂದರೆ ಸಾಕ್ಷಿ ನನಗೆ ಗೂತ್ತಿಲ್ಲಾ ಎಂದು ಹೇಳುತ್ತಾರೆ.

ನನ್ನ ಮಗ ಒಳರೋಗಿ ಆಗಿ ಚಿಕಿತ್ಸೆ ಪಡೆದಿದ್ದ ಅದಕ್ಕಾಗಿ 5 ಲಕ್ಷ ರೂಪಾಯಿ ಖರ್ಚು ಆಗಿದೆ ಎಂದು ಸುಳ್ಳು ಹೇಳಿ ಬರೆಸಿದ್ದೇನೆ ಅಂದರೆ ಸರಿಯಲ್ಲ. 3 ಮತ್ತು 4 ಅರ್ಜಿದಾರರು ನನ್ನ ಮಕ್ಕಳು ಅಂದರೆ ಸರಿ. ಅವರು ನನ್ನ ಮೃತ ಮಗ ಪ್ರಕಾಶ ಇವರ ಆದಾಯದ ಮೇಲೆ ಅವಲಂಬಿತರಾಗಿರಲಿಲ್ಲಾ ಎಂದು ಹೇಳುವುದು ಸರಿಯಲ್ಲ. ದೋಷಾರೋಪಣೆ ಪಟ್ಟಿಯನ್ನು ಇಬ್ಬರು ಅಟೋ ಚಾಲಕರ ವಿರುದ್ದ ಹಾಕಿದ್ದಾರೆ ಅಂದರೆ ಸರಿ. ಅಟೋ ನಂಬರ KA 32-D-9993 ವಾಹನ ಚಾಲಕನ ತಪ್ಪಿನಿಂದ ಅಪಘಾತ ಅಗಿದ್ದರೂ ಸಹ ಪೊಲೀಸರು ಅಟೋ ನಂಬರ KA 32-D-2776 ಚಾಲಕನ ವಿರುದ್ದವು ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದಾರೆ ಅಂದರೆ ಸರಿಯಲ್ಲ. ಡಿಸಚಾರ್ಜ ಸಮರಿ ಹಾಗೂ ಔಷಧಿ ಬಿಲ್ಲುಗಳನ್ನು ಸೃಷ್ಟಿಸಿ ಹಾಕಿದ್ದವೇ ಅಂದರೆ ಸರಿಯಲ್ಲ. ನಾವು ಕೇಳಿರುವ ಪರಿಹಾರದ ಮೊತ್ತಕ್ಕೆ ಆಧಾರ ಇಲ್ಲಾ ಅಂದರೆ ಸರಿಯಲ್ಲ. ಈ ಅಪಘಾತವು ಅಟೋ ನಂಬರ KA 32-D-2776 ಚಾಲಕನ ತಪ್ಪಿನಿಂದ ಅಗಿಲ್ಲ ಎನ್ನುವುದು ಸರಿಯಲ್ಲ. ನಾನು ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ.

ಎಮ್ ವಿ ಸಿ ನಂಃ **890/2022**

**ಪಿ.ಡಬ್ಲ್ಯೂಃ1, ಗಣಪತಿ**

<u>ಪಾಟಿ ಸವಾಲು :-</u> 1 ಮತ್ತು  2 ನೇ ಪ್ರತಿವಾದಿಮತ್ತು ಅವರ ಪರ ವಲರು ಗೈರು ಹಾಜರಿದ್ದು ಆದ್ದರಿಂದ ಪಟಿ ಸವಾಲು ಇಲ್ಲಾ ಎಂದು ತೆಗೆದುಕೂಳ್ಳಲಾಯಿತು.

<u>ಮರು ವಿಚಾರಣೆಃ ಇಲ್ಲಾ</u>

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

ಹಿರಿಯ ಸಿವಿಲ್ ನ್ಯಾಯಾಧೀಶರು
**ಚಿತ್ತಾಪೂರ.**